ಸೀಮಿತಗೊಳಿಸದೆ ಹೆಚ್ಚು ಪಾತ್ರಗಳಿಗೆ ಪಳಗಿಸುವ ಕೆಲಸ.

ಮುಖ್ಯವಾಗಿ ಇಲ್ಲಿ ನಡೆಯುವ ವಿದ್ಯಮಾನವೆಂದರೆ, ಒಂದು ನಾಟಕ ನಡೆಯುತ್ತಿರುವಾಗಲೇ ನಟರು ಎಂಗೇಜ್ ಆಗುವ ಹಾಗೆ ಪ್ರೇಕ್ಷಕರೂ ಎಂಗೇಜ್ ಆಗಿರುತ್ತಾರೆ. ಅಂದರೆ, ಎರಡೂ ವಿದ್ಯಮಾನಗಳೂ ಒಂದೇ ಕಾಲಘಟ್ಟದಲ್ಲಿ ನಡೆಯುವ 'ಲೈವ್' ಅನುಭವಗಳು.

ಒಬ್ಬ ನಟ ನಿರ್ಗಮಿಸಿದರೆ ಒಬ್ಬ ಪ್ರೇಕ್ಷಕನೂ ಅವನ ಹಿಂದೆಯೇ ಹೋಗುತ್ತಾನೆ. ನಟರ ಎನರ್ಜಿ ಪ್ರೇಕ್ಷಕರಿಗೆ ದಾಟುತ್ತದೆ. ಇನ್ನೊಬ್ಬ ನಟ ರಂಗದ ಮೇಲೆ ಬಂದರೆ ಅವನ ಜೊತೆಯೇ ಪ್ರೇಕ್ಷಕನೂ ಮತ್ತೆ ನಾಟಕದ ಒಳಗೆ ಪ್ರವೇಶ ಮಾಡುತ್ತಾನೆ. ಒಂದು ಹಾಡಿಗೆ ತಲೆದೂಗುವುದು, ಒಂದು ನಟನೆಯ ಶೈಲಿಗೆ ಅಹಾ! ಎನ್ನಿಸುವುದು, ನಗುವುದು, ಮ್ಲಾನವಾಗುವುದು ಎಲ್ಲವೂ ಒಂದೇ ಕಾಲಮಾನದಲ್ಲಿ ನಡೆಯುತ್ತದೆ. ಈ ಎಲ್ಲಾ ಪ್ರತಿಕ್ರಿಯೆಗಳನ್ನು ಕಂಡು ನಟರು ಇನ್ನೂ ಉತ್ತೇಜಿತರಾಗುತ್ತಾರೆ.

ನಾಟಕ ಚೆನ್ನಾಗಿ 'ರಿಸೀವ್' ಆಗ್ತಿದೆ ಎನ್ನುವುದು ಅವರಿಗೆ ಮನವರಿಕೆ ಆಗುತ್ತದೆ. ನಾಟಕ ಇನ್ನೂ ಚೆನ್ನಾಗಿ ಮೂಡುತ್ತದೆ. ಸಿನಿಮಾದಲ್ಲಿ ನೀವು ಏನೇ ಮಾಡಿದರೂ ಅದು ಬಾಕ್ಸಾಫೀಸ್ ಕಲೆಕ್ಷನ್ನಿನ ಮೇಲೆ ಮಾತ್ರ ನಿಲ್ಲುವುದರಿಂದ ಪ್ರೇಕ್ಷಕರಾಗಿ ನಿಮ್ಮ ದುಡ್ಡು ಮಾತ್ರವೇ ಅದರ ಯಶಸ್ಸನ್ನು ಅಳೆಯುವ ಮುಖ್ಯ ಮಾನದಂಡವಾಗುತ್ತದೆ. ಆದರೆ, ನಾಟಕ ಹಾಗಲ್ಲ. ಜಾಸ್ತಿ ಪ್ರೇಕ್ಷಕರು ಬಂದರೆ ನಾಟಕ ತಂಡಕ್ಕೆ ಒಳ್ಳೆಯದು ನಿಜವೇ, ಆದರೆ ಬಂದ ಪ್ರೇಕ್ಷಕರು ಏನೂ ಪ್ರತಿಕ್ರಿಯೆ ತೋರದೆ ಮುಗುಮ್ಮಾಗಿ ಕೂತರೆ ನಾಟಕ ಮಾಡುತ್ತಿರುವ ಕಲಾವಿದರಿಗೆ ತಮ್ಮ ನಾಟಕ ಪ್ರೇಕ್ಷಕರನ್ನು ತಲುಪುತ್ತಾ ಇದೆಯೋ ಇಲ್ಲವೋ ಎಂಬ ದ್ವಂದ್ವ ಶುರುವಾಗುತ್ತದೆ.

ಹಾಗಾಗಿ, ನಗುವಾಗ ನಕ್ಕು, ನಗಬೇಕಾದಾಗ ನಕ್ಕು, ನಗು ಬಂದಾಗ ನಕ್ಕು, ಅಬ್ಬ! ಎನ್ನಿಸಿದ ಘಳಿಗೆಗಳಲ್ಲಿ ಅದನ್ನು ಅನುಭವಿಸಿ ಸೀನ್ ಮುಗಿದಾಗ ಚಪ್ಪಾಳೆ ತಟ್ಟಿ, ನಾಟಕದ ಕೊನೆಗೆ ಆಗುವ ಪಾತ್ರ ಪರಿಚಯದ ಸಮಯದಲ್ಲಿ ಕೂಡ ಚಪ್ಪಾಳೆಯ ಮೂಲಕ ನಿಮ್ಮ ಹರ್ಷ ವ್ಯಕ್ತಪಡಿಸಿದರೆ ಕಲಾವಿದರು ಇನ್ನೂ ಬೆಳವಣಿಗೆ ಹೊಂದಲು ಆಸಕ್ತಿ ಬೆಳೆಸಿಕೊಳ್ಳುತ್ತಾರೆ.

ನೀವು ತಟ್ಟಿದ ಚಪ್ಪಾಳೆ ಸಿನಿಮಾ ಹಾಲ್‌ನಲ್ಲಿ ಆಗುವ ಹಾಗೆ ನಿಮ್ಮ ನಡುವೆಯೇ ಕಳೆದುಹೋಗುವುದಿಲ್ಲ. ನಿಜವಾಗಿಯೂ ಕಷ್ಟಪಟ್ಟು ಯಾವ ಚೌಕಾಸಿಯನ್ನೂ ಮಾಡದೆ ನಿಮ್ಮ ಮುಂದೆ ಸಂಪೂರ್ಣ ತೊಡಗಿಕೊಂಡು ತಮ್ಮ ಕಲೆಯನ್ನು ಪ್ರಸ್ತುತ ಪಡಿಸಿದ ಕಲಾವಿದರಿಗೇ ಮುಟ್ಟುತ್ತದೆ. ಮತ್ತೆ ಆ ಕಲಾವಿದರಿಗೆ ನಿಮ್ಮ ಮೆಚ್ಚುಗೆಯ ಹೊರತು ಮತ್ತೇನೂ ಬೇಕಿಲ್ಲ. ಅಭಿಮಾನಿ ಸಂಘಗಳು, ಕಟೌಟು, ಹಾಲಿನ ಅಭಿಷೇಕ ಯಾವುದೂ ಬೇಡ. ನಿಮ್ಮ ಅವರ ನಡುವೆ ಕತ್ತಲೆ ಬೆಳಕಿನ ಆಟದಲ್ಲಿ ಕಟ್ಟಿಕೊಂಡ ಸೇತುವೆ ಮಾತ್ರವೇ ಸಾಕು. ಈವತ್ತಿನ ಭಾಷೆಯಲ್ಲಿ ಹೇಳುವುದಾದರೆ ನಾಟಕವೊಂದು 'ರಿಯಲ್ ಟೈಮ್'ನಲ್ಲಿ ಆಗುವ ಪ್ರಕ್ರಿಯೆ. ಕಾಲು ಚಾಚಿ ನಾಟಕ ನೋಡುವ ಪ್ರೇಕ್ಷಕರು ಸಾಕ್ಷಾತ್ ದೊರೆ ಸಮಾನರು!

ನಾಟಕ ನೋಡಲು ಪ್ರೇಕ್ಷಕರು ಕೂಡ ತಯಾರಿ ಮಾಡಿಕೊಳ್ಳಬಹುದು. ಆಗಂತೂ ನಾಟಕದ ರುಚಿ ಇನ್ನೂ ಹೆಚ್ಚುತ್ತದೆ.

ಅದಕ್ಕೆ ಮುಖ್ಯವಾಗಿ ಬೇಕಿರುವುದು ನಾಟಕ ನೋಡಬೇಕು ಎನ್ನುವ ಮನಃಸ್ಥಿತಿ. ಚೆನ್ನಾಗಿರಲಿ, ಇಲ್ಲದಿರಲಿ, ನನಗೆ ಅರ್ಥವಾಗಲಿ ಬಿಡಲಿ... ಈ ನಾಟಕ ನೋಡಿಯೇ ನೋಡುತ್ತೇನೆ ಎನ್ನುವ ಒಂದು ನಿರ್ಧಾರ. ನಾಟಕ ನೋಡುವಾಗ ದಯವಿಟ್ಟು ಬಾಹ್ಯ ಜಗತ್ತಿನ ಕಳವಳ ಬಿಟ್ಟು ಬಿಡಿ. ಒಂದೂವರೆ ಅಥವಾ ಎರಡು ಘಂಟೆಯಲ್ಲಿ ನಿಮ್ಮ ಜಗತ್ತು ಮುಳುಗಿಹೋಗುವುದಿಲ್ಲ.

ಬೆಂಗಳೂರಿನ ರಂಗಶಂಕರದಲ್ಲಿ ಸ್ವತಃ ಗಿರೀಶ ಕಾರ್ನಾಡರೇ ದೃಢ ಧ್ವನಿಯಲ್ಲಿ (ಅಫ್ ಕೋರ್ಸ್, ಧ್ವನಿ ಮುದ್ರಿತ) ಹೇಳಿಬಿಡುತ್ತಾರೆ. "ನಾಟಕದ ಸಮಯದಲ್ಲಿ ಪ್ರದರ್ಶನಕ್ಕೆ ವ್ಯತ್ಯಯ ಬಾರದಂತೆ